# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,

# ಬೆಂಗಳೂರು ನಗರ.

## ಸಿಸಿ. 7766/2014

**ಚಾಸಾ- 3 ಪ್ರಾಸಾ- 3**

| | |
|---|---|
| **ಸಾಕ್ಷಿದಾರರ ಹೆಸರು** | ವಿಜಯ್ ಕುಮಾರ್ , |
| **ತಂದೆಯ ಹೆಸರು** | ದೇವರಾವ್ |
| **ವಯಸ್ಸು** | 38 ವರ್ಷ |
| **ಉದ್ಯೋಗ** | ಖಾಸಗಿ ಕಂಪನಿಯಲ್ಲಿ ಕೆಲಸ |
| **ವಾಸ** | ರಾಮನಗರ |
| **ಪ್ರಮಾಣೀಕರಿಸಿದ ದಿನಾಂಕ** | 02.03.2024 |

**ಮುಖ್ಯ ವಿಚಾರಣೆ : ಶ್ರೀ.ಎಂ.ಬಿ.ಆರ್. ವಿಶೇಷ ಅಭಿಯೋಜಕರವರಿಂದ :**

ನ್ಯಾಯಾಲಯದ ಮುಂದೆ ಇರುವ ಆರೋಪಿ ಪಾರ್ವತಿ ಮತ್ತು ಭಸ್ಕರ್ ಇರುತ್ತಾರೆ ಅವರ ಪರಿಚಯ ನನಗೆ ಇರುತ್ತದೆ. ನಾನು 2007 ರಿಂದ 2012 ರವರೆಗೆ ಮ್ಯಾಕ್ಸ್ ಮೋಟಾರ್ಸ್ ನಲ್ಲಿ ಸೇಲ್ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡಿದ್ದೇನೆ. ನಮ್ಮ ಕಂಪನಿ ಡಾ.ರಾಜ್ ಕುಮಾರ್ ರಸ್ತೆ, ರಾಜಾಜಿನಗದರಲ್ಲಿರುತ್ತದೆ.

2. ಮ್ಯಾಕ್ಸ್ ಮೋಟಾರ್ಸ್ ಗೆ ದಿ.15.09.2011 ರಂದು ಪೊಲೀಸರು ಬಂದಿದ್ದರು. ಆರೋಪಿತರು ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ತಿಳಿಸಿ ಆರೋಪಿತರು ಏನು ಕೆಲಸ ಮಾಡುತ್ತಿದ್ದರು ಎಂದು ಕೇಳಿ ನನ್ನ ಸಹಿ ಪಡೆದಿರುತ್ತಾರೆ. ಪೊಲೀಸರು 12.30 ರಿಂದ 01.30 ರವೆಗೆ ನಮ್ಮ ಸಮಕ್ಷಮ ಬರವಣಿಗೆ ಮಾಡಿರುತ್ತಾರೆ. ಅದರಲ್ಲಿ ನನ್ನ ಸಹಿ ಇರುತ್ತದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಅದು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ನನ್ನ ಜೊತೆ ಚೇತನ್ ಮತ್ತು ಅವಿಜಿತ್ ರವರು ಸಹ ಇದ್ದರು. ಸದರಿ ಚೆಕ್ಕು ಬಂಧಿ ಹೇಳಲು ಬರುತ್ತದೆ . ನಮ್ಮ ಕಚೇರಿ ಮುಂದೆ ರಾಜ್ ಕುಮಾರ್ ರಸ್ತೆ ಇರುತ್ತದೆ. ಪೂರ್ವಕ್ಕೆ ಸರ್ವಿಸ್ ರಸ್ತೆ ಇರುತ್ತದೆ, ಉತ್ತರಕ್ಕೆ ಒಂದು ರಿಸರ್ಚ್ ಕಂಪನಿ ಇರುತ್ತದೆ

ಮತ್ತು ದಕ್ಷಿಣಕ್ಕೆ ಅಭಿಮಾನಿ ಹೋಟೆಲ್ ಇರುತ್ತದೆ. ಪಿಎಸ್ ಐ ಮಹಜರ್ ಮಾಡಿರುತ್ತಾರೆ. 2009-2010 ರಲ್ಲಿ ರೂ.1,31,00,000/- ಮತ್ತು 2010-2011 ರಲ್ಲಿ ರೂ.30 ಲಕ್ಷ ಆರೋಪಿತರು ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ಅದರಲ್ಲಿ ಬರೆದಿರುತ್ತಾರೆ.

**ಪಾಟೀ ಸವಾಲು : ಶ್ರೀ. ಎಸ್ ಆರ್ ಎನ್ ವಕೀಲರಿಂದ ಒಂದನೇ ಆರೋಪಿ ಪರ**

ನಾನು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಪೊಲೀಸ್ ಠಾಣೆಗೆ ಹೋಗಿಲ್ಲ. ಪೊಲೀಸರು ಶೋ ರೂಮ್ ಗೆ ಬಂದಿದ್ದರು ಆಗ ನಾನು ಹೇಳಿಕೆ ಕೊಟ್ಟಿದ್ದೇನೆ. ಹಣ ದುರುಪಯೋಗ ಆಗಿದೆ ಎಂದು ಹೇಳಿರುತ್ತೇನೆ. ಅದನ್ನು ಬಿಟ್ಟು ಬೇರೆ ಏನು ಹೇಳಿಲ್ಲ. ಸದರಿ ಹೇಳಿಕೆಗೆ ಮಾತ್ರ ಸಹಿ ಮಾಡಿರುತ್ತೇನೆ ಎಂದರೆ ಸರಿ. ಇದನ್ನು ಹೊರತುಪಡಿಸಿ ಬೇರೆ ಏನು ನನಗೆ ಗೊತ್ತಿಲ್ಲ ಎಂದರೆನಿ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 12.30 ರಿಂದ 01.30 ವರೆಗೆ ಪೊಲೀಸರು ಇದ್ದರು. ನಾನು ಶೋ ರೂಮ್ ನಲ್ಲಿಯೆ ಇದ್ದೆ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು . ಶ್ರೀಮತಿ. ಎಲ್ ಕೆ, ಎರಡನೇ ಆರೋಪಿ ಪರ**

ಒಂದನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು.)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**